ಸಿಸಿ. ನಂಬರಃ 803/2022

ಪಿ. ಡಬ್ಲ್ಯೂಃ 1

ದಿಃ 07-02-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್ ಓ ಎನ್ ರವರರಿಂದಃ

ನನಗೆ ಆರೋಪಿಯು 25 ವರ್ಷಗಳಿಂದ ಪರಿಚಯವಿರುತ್ತಾನೆ. ಆರೋಪಿಗೆ ಯಾವ ಉದ್ದೇಶಕ್ಕಾಗಿ ಸಾಲವನ್ನು ಕೊಟ್ಟಿರುತ್ತೀರಿ ಎಂದರೆ ಬಿಜಿನೆಸ್ ಮಾಡುವ ಸಲುವಾಗಿ ಸಾಲವನ್ನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಯಾವ ಬಿಜಿನೆಸ್ ಎಂದು ಕೇಳಿದ್ದಕ್ಕೆ ಸಾಕ್ಷಿಯು ನಿರ್ಧಿಷ್ಟವಾಗಿ ಯಾವುದು ಎಂದು ಗೊತ್ತಿರುವುದಿಲ್ಲ, ಆದರೆ ಮೊಬೈಲ್ ಕಮ್ಯುನಿಕೇಶನ್ ಇರುತ್ತದೆ ಎಂದು ನುಡಿಯುತ್ತಾರೆ. ದುಡ್ಡು ಕೊಟ್ಟಿದ್ದರ ಬಗ್ಗೆ ಬರವಣಿಗೆಯನ್ನು ಮಾಡಿಕೊಟ್ಟಿರುವುದಿಲ್ಲ. ಬಡ್ಡಿಯನ್ನು ಕೊಡುವ ಮಾತುಕತೆಯಾಗಿರುವುದಿಲ್ಲ. ಇಷ್ಟು ದೊಡ್ಡ ಮೊತ್ತದ ಸಾಲವನ್ನು ಬೇರೆ ಯಾರಿಗೂ ಕೊಟ್ಟಿರುವುದಿಲ್ಲ. ಆರೋಪಿಯನ್ನು ಬಿಟ್ಟು ಬೇರೆ ಯಾರಿಗೂ ಸಾಲವನ್ನು ಕೊಟ್ಟಿರುವುದಿಲ್ಲ. ನನಗೆ ಯಾರೂ ಸಹ ಬಡ್ಡಿ ರಹಿತವಾಗಿ ಸಾಲವನ್ನು ಕೊಟ್ಟಿರುವುದಿಲ್ಲ. ನೀವು ಹಾಜರುಪಡಿಸಿದ ಚೆಕ್ಕನ್ನು ಬ್ಯಾಂಕಿಗೆ ಹಾಕುವ ಮುನ್ನ ಎಷ್ಟು ದಿನಗಳ ತನಕ ಮನೆಯಲ್ಲಿ ಇತ್ತು ಎಂದರೆ ಸಾಕ್ಷಿಯು ಒಂದೆರಡು ದಿನಗಳಲ್ಲಿ ಬ್ಯಾಂಕಿಗೆ ಹಾಕಿರುತ್ತೇನೆ ಎಂದು ನುಡಿಯುತ್ತಾರೆ.

2. ಎಷ್ಟು ದಿನಗಳಿಂದ ಆರೋಪಿಗೆ ದುಡ್ಡನ್ನು ಮರುಪಾವತಿ ಮಾಡಲು ಕೊರಿಕೊಂಡಿರುತ್ತೀರಿ ಎಂದರೆ ಸಾಕ್ಷಿಯು ಸುಮಾರು 8 ತಿಂಗಳುಗಳಿಂದ ಕೇಳುತ್ತಿದ್ದೇನೆ ಎಂದು ನುಡಿಯುತ್ತಾರೆ. ಕೊನೆಯದಾಗಿ ಪೇಮೆಂಟ್ ಮಾಡಿದ 8 ತಿಂಗಳಿನಿಂದ ಕೇಳುತ್ತಿದ್ದೇನೆ. ಕೊನೆಯ ಪೇಮೆಂಟ್ ಮಾಡಿದ ಎಷ್ಟು ದಿನಗಳ ನಂತರ ಆರೋಪಿಯು ಚೆಕ್ಕನ್ನು ಕೊಟ್ಟಿರುತ್ತಾನೆ ಎಂದು ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿಯು 8 ತಿಂಗಳ ನಂತರ ಚೆಕ್ಕನ್ನು ಕೊಟ್ಟಿರುತ್ತಾನೆ ಎಂದು ನುಡಿಯುತ್ತಾರೆ. ಚೆಕ್ಕನ್ನು ಕೊಡುವ ಪೂರ್ವದಲ್ಲಿ ನೀವೇನಾದರೂ ಪೊಲೀಸರ ಮುಂದೆ ದೂರನ್ನು ನೀಡುತ್ತೇನೆ ಎಂದು ಬೆದರಿಕೆಯನ್ನೇನಾದರೂ ಹಾಕಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನನ್ನ ಪ್ರಕಾರ ಆರೋಪಿಯು ಸ್ವಖುಷಿಯಿಂದ ಚೆಕ್ಕನ್ನು ಕೊಟ್ಟಿರುತ್ತಾನೆ. ನೀವು ಹಣವನ್ನು ಯಾವ ರೀತಿ ಕೊಟ್ಟಿರುತೀರಿ ಎಂದರೆ ಸಾಕ್ಷಿಯು ಸ್ವಲ್ಪ ಹಣವನ್ನು ಚೆಕ್ಕಿನ ಮುಖಾಂತರ ಹಾಗೂ ಇನ್ನುಳಿದ ಹಣವನ್ನು ನಗದು ಮುಖಾಂತರ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಯಾವ ಬ್ಯಾಂಕ್ ಖಾತೆಯಿಂದ ಹಣವನ್ನು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ(ಈಗಿನ ಕಾರ್ಪೊರೇಷನ್) ಬ್ಯಾಂಕ್ ಮತ್ತು ಅಂಕೋಲಾ ಅರ್ಬನ್ ಬ್ಯಾಂಕ್ ಬ್ಯಾಂಕಿನ ಚೆಕ್ಕನ್ನು ಕೊಟ್ಟಿರುತ್ತೇನೆ. ಯುನಿಯನ್ ಬ್ಯಾಂಕಿನ ಮುಖಾಂತರ ರೂ. 4 ಲಕ್ಷ ಕೊಟ್ಟಿರುತ್ತೇನೆ. ಹಾಗೂ ಅರ್ಬನ್ ಬ್ಯಾಂಕ್ ಮುಖಾಂತರ 88 ಸಾವಿರ ಕೊಟ್ಟಿರುತ್ತೇನೆ. ಆ ರೀತಿ ಪೇಮೆಂಟ್ ಮಾಡಿರುವುದನ್ನು ತೋರಿಸಲು ಬ್ಯಾಂಕಿನ ಖಾತೆಯ ಎಕ್ಸಟ್ರ್ಯಾಕ್ ನ್ನು ಹಾಜರುಪಡಿಸಲು ತೊಂದರೆ ಇದೆಯಾ

ಎಂದರೆ ಹಾಜರುಪಡಿಸುತ್ತೇನೆ. ನಾನು 2 ಟ್ರ್ಯಾಂಜಾಕ್ಸನ್ ನಲ್ಲಿ ಹಣವನ್ನು ಕೊಟ್ಟಿರುತ್ತೇನೆ. 1 ಟ್ರ್ಯಾಂಜಾಕ್ಸನ್ ನಿಂದ ಇನ್ನೊಂದು ಟ್ರ್ಯಾಂಜಾಕ್ಸನ್ ಮಾಡುವಲ್ಲಿ 2 ದಿನ ಗ್ಯಾಪ್ ಇತ್ತು. ಹಣವನ್ನು ಯಾವಾಗ ಕೊಡಬೇಕು ಎನ್ನುವದರ ಬಗ್ಗೆ ಒಪ್ಪಂದವಾಗಿರುವುದಿಲ್ಲ. ಅದೇ ರೀತಿ ಅರ್ಬನ್ ಬ್ಯಾಂಕ್ ಮುಖಾಂತರ 88 ಸಾವಿರ ಕೊಟ್ಟ ಹಣವನ್ನು ಯಾವಾಗ ಹಿಂದಿರುಗಿ ಕೊಡಬೇಕು ಎಂದು ಒಪ್ಪಂದವಾಗಿರುವುದಿಲ್ಲ. ನಿಮ್ಮ ಮನಸ್ಸಿನಲ್ಲಿ ಏನಾದರೂ ಆರೋಪಿತನು ಇಷ್ಟು ಅವಧಿಯಲ್ಲಿ ಕೊಡುತ್ತಾನೆ ಎಂದು ನಂಬಿಕೆ ಇತ್ತಾ ಎಂದರೆ ಸಾಕ್ಷಿಯು 1-2 ವರ್ಷಗಳಲ್ಲಿ ಕೊಡುತ್ತಾನೆ ಎನ್ನುವ ನಂಬಿಕೆ ಇತ್ತು ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲನ್ನು ವಿನಂತಿ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಅಂಕೋಲಾ.